**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚನ್ನಗಿರಿ**

ಸಿಸಿ ನಂ.**3167/2025**

ಹೆಸರುಃ ನೌಶದ್ ಅಲಿ ಚಾಸಾಃ 3

ತಂದೆಯ ಹೆಸರುಃ ಶೌಕತ್ ಅಲಿ ಪ್ರಾಸಾ: 2

ವಯಸ್ಸುಃ 27 ವರ್ಷ

ಉದ್ಯೋಗಃ ಹಮಾಲಿ ಕೆಲಸ

ವಾಸ ಸ್ಥಳಃ ಹೊನ್ನೆಬಾಗಿ ಗ್ರಾಮ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 08-06-2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ- 2 ಕ್ಕೆ ಹೊನ್ನೆಬಾಗಿಯ ಬಸ್ ಸ್ಟಾಂಡ್ ಬಳಿ ಸಹಿ ಮಾಡಿರುತ್ತೇನೆ. ಚಾಸಾ-1 ಮತ್ತು ಆರೋಪಿತರ ನಡುವೆ ಆದಜಗಳ ವಿಚಾರವಾಗಿ ನಿಪಿ-2 ಕ್ಕೆ ನಾನು ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ-2 ರವರು ಹಾಜರಿದ್ದು ಸಹಿ ಮಾಡಿರುತ್ತಾರೆ. ನಿಪಿ-2 ಕ್ಕೆ ಮದ್ಯಾಹ್ನ1.00 ಗಂಟೆಯ ಅವಧಿಯಲ್ಲಿ ಮಾಡಿರುತ್ತೇನೆ. ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿ-3 ಫೊಟೋವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು, ಅದನ್ನು ಹೊನ್ನೆಬಾಗಿ ಮೇಲ್ ಬಸ್ಸ್ಟಂಡ್ ಬಳಿ ತೆಗೆದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಮಹಜರನ್ನು ನೋಡಲಾಗಿ ಸಾಕ್ಷಿಯು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ.**

**ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 02-12-2024 ಹ್ದದು ಚಾಸಾ-1ರವರು ತೋರಿಸಿದ ಸ್ದಳದಲ್ಲಿ ಗಲಾಟೆಯ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದು ನನ್ನ ಹಾಗೂ ಚಾಸಾ-1 ಮತ್ತು 2 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆಯನ್ನು  ಮದ್ಯಾಹ್ನ 12.00 ರಿಂದ 1.00 ರವರೆಗೂ ಮಹಜರು ಕ್ರಮ ಜರುಗಿಸಿ  ಅದಕ್ಕೆ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿ.  ನಿಪಿ-2ರ ಕಾಲಕ್ಕೆ ನಮ್ಮ ಸಮಕ್ಷಮ ಮು.ಮಾ-1 ನ್ನು ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.  ನಿಪಿ-3 ಪೊಟೋವನ್ನು ನಿಪಿ-2ರ ಕಾಕ್ಕೆ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ  ಪರ ಶ್ರೀ ಬಿ ಆರ್ ವಕೀಲರಿಂದ**

ನಾನು ಹೊನ್ನೆಬಾಗಿಯಲ್ಲಿ  ಹಮಾಲಿ  ಕೆಲಸ ಮಾಡಿಕೊಂಡಿರುತ್ತೇನೆ. ನಿಪಿ-2 ಕಾಲಕ್ಕೆ ನಾನು ಬೇಕರಿಗೆ ಸಾಮಾನುಗಳನ್ನು  ತೆಗೆದುಕೊಳ್ಳಲು ಬಂದಿರುತ್ತೇನೆ. ಆ ದಿನ ನಾನು ಹಮಾಲಿ ಕೆಲಸಕ್ಕೆ ಹೋಗಿರುವುದಿಲ್ಲ. ಘಟನಾ ಸ್ಥಳವು ಹೆಚ್ಚು ಜನಸಂದಣಿಯಿಂದ  ಕೂಡಿರುತ್ತದೆ ಎಂದರೆ ಸರಿ.  ಘಟನಾ ಸ್ಥಳದಲ್ಲಿ ಹಲವಾರು ಅಂಗಡಿಗಳು ಇದ್ದು, ಚಾಸಾ-1ರವರ ಹೆಸರು ಹೊರತುಪಡಿಸಿ ಬೇರೆ ಯಾವುದೇ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಮುಸ್ಲಿಂ ಸಮುದಾಯದವರನ್ನು ಹೊರತುಪಡಿಸಿ ಬೇರೆ ಯಾವುದೇ ಸಮುದಾಯದವರ ಅಂಗಡಿ ಇರುವುದಿಲ್ಲ ಎಂದರೆ ಸರಿ. ಮು.ಮಾ-1 ನ್ನು ಎಲ್ಲಿಂದ ಯಾರು ತೆಗೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಸಹಿ ಮಾಡಿರುವುದಿಲ್ಲ. ನಿಪಿ-2 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-1 ರವರು ಸ್ನೇಹಿತರು ಎಂದರೆ ಸರಿ. ಪೊಲೀಸರು ಯಾವುದೇ ಸ್ಥಳಕ್ಕೆ ಬಂದಿರುವುದಿಲ್ಲ, ನಮ್ಮ ಸಮಕ್ಷಮಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ.

ನಿಪಿ-2 ಕ್ಕೆ ಸಹಿ ಮಾಡಿದ ವಿಚಾರವನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಯವರ ನ್ಯಾಯಾಲಯ, ಚನ್ನಗಿರಿ**

ಸಿಸಿ ನಂ.**3167/2025**

ಹೆಸರುಃ ಆಶೀಕ್ ಅಹಮ್ಮದ್ ಚಾಸಾಃ 1

ತಂದೆಯ ಹೆಸರುಃ ನೀಸಾರ್ ಅಹಮ್ಮದ್ ಪ್ರಾಸಾ: 1

ವಯಸ್ಸುಃ 27 ವರ್ಷ

ಉದ್ಯೋಗಃ ಟ್ರಾಕ್ಟರ್ ಚಾಲಕ

ವಾಸ ಸ್ಥಳಃ ಹೊನ್ನೆಬಾಗಿ ಗ್ರಾಮ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 08-06-2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-4 ರಿಂದ 9 ನನ್ನ ಅಣ್ಣ, ತಮ್ಮಂದಿರು, ಆರೋಪಿತರೆಲ್ಲಾರೂ ನಮ್ಮ ಗ್ರಾಮದವರು.

ದಿಃ 30-11-2024 ರಂದು ಹೊನ್ನೆಬಾಗಿಯ ಮೇಲಿನ ಬಸ್ ಸ್ಟಾಪ್‌ನಲ್ಲಿರುವ ನಮ್ಮ ಅಂಗಡಿಯಲ್ಲಿದ್ದಾಗ ರಾತ್ರಿ 9.00 ಗಂಟೆ ಸಮಯದಲ್ಲಿ 1, 2 ಮತ್ತು 7 ನೇ ಆರೋಪಿತರು ನನಗೆ ಬೈಗುಳ ಬೈಯ್ದು ನನ್ನ ಕೊರಳಪಟ್ಟಿಯನ್ನು ಹಿಡಿದುಕೊಂಡು ಹೋಗಿ ಹೊಡೆದಿರುತ್ತಾರೆ. 3ನೇ ಆರೋಪಿ ಚಾಸಾ-4 ರವರಿಗೆ ಪೈಪ್‌ನಿಂದ ಹಲ್ಲೆ ಮಾಡಿ ಅವರ ತಲೆಯನ್ನು ಹೊಡೆದು ಹಾಕಿರುತ್ತಾರೆ. ಉಳಿದ ಆರೋಪಿತರು ಸ್ಥಳದಲ್ಲಿದ್ದು ನಮಗೆ ಹೊಡೆಯಿರಿ ಎಂದು ಕುಮ್ಮಕ್ಕು ನೀಡಿರುತ್ತಾರೆ. ನಂತರ ಚನ್ನಗಿರಿಯ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದು ಹೇಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ದಿಃ 01-12-2024 ರಂದು ಆರೋಪಿತರು ನಮಗೆ ಹಲ್ಲೆ ಮಾಡಿದ ವಿಚಾರವಾಗಿ ಚನ್ನಗಿರಿ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. 3ನೇ ಆರೋಪಿ ಚಾಸಾ-4 ರವರಿಗೆ ಹಲ್ಲೆ ಮಾಡಿದ ಪೈಪ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಪೈಪ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ಮಾರನೇ ದಿನ ಅಂದರೆ ದಿಃ 02-12-2024 ರಂದು ಪೊಲೀಸರು ಸ್ಥಳಕ್ಕೆ ಬಂದು ನಮ್ಮಿಂದ ಮದ್ಯಾಹ್ನ 2.00 ರಿಂದ 3.00 ರವರೆಗೂ ಮಾಹಿತಿ ಪಡೆದು ನಮ್ಮ ಸಮಕ್ಷಮ ಮು.ಮಾ-1 ನ್ನು ತೆಗೆದುಕೊಂಡು ಹೋಗಿರುತ್ತಾರೆ. ಆ ಕಾಲಕ್ಕೆ ನಾನು , ಚಾಸಾ-2 ಮತ್ತು 3 ಹಾಜರಿದ್ದು ಆಗ ಪೊಲೀಸರು ಒಂದು ಪೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಸ್ಥಳ ಮತ್ತು ಅಮಾನತುಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿದ್ದು, ನನ್ನೊಂದಿಗೆ ಚಾಸಾ-2 ಮತ್ತು 3 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-3 ಪೊಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,ದೂರು ಮತ್ತು ಮಹಜರನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನಿಪಿ-1 ರಲ್ಲಿ 1 ಮತ್ತು 2ನೇ ಅರೋಪಿತರು ಹಣದ ವಿಚಾರವಾಗಿ ಏಕಾ ಏಕಿ ನಮ್ಮ ಅಂಗಡಿ ಬಳಿ ಬಂದು ನನ್ನನ್ನು ನೂಕಿ ಎಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. 4 ರಿಂದ 9 ನೇ ಆರೋಪಿತರು ನಮ್ಮನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ ಎಂದರೆ ಸರಿ. ಆರೋಪಿತರೆಲ್ಲಾರೂ ಸೇರಿಕೊಂಡು ನಮಗೆ

ಹೊಡೆದಿರುತ್ತಾರೆ ಎಂದು ನಿಪಿ-1ರಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಆರೋಪಿತರು ಜಗಳ ಬಿಡಿಸಲು ಬಂದ ಚಾಸಾ- 5 ಮತ್ತು 6 ರವರಿಗೂ ಸಹ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

ಘಟನಾ ನಂತರ ಪೊಲೀಸರು ಸ್ಥಳಕ್ಕೆ ಬಂದು ನಿಪಿ-2 ರಂತೆ ನನ್ನ ಸಮಕ್ಷಮ ಮದ್ಯಾಹ್ನ 12.00 ರಿಂದ 1.00 ರವರೆಗೂ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ  ಪರ ಶ್ರೀ ಬಿ ಆರ್ ವಕೀಲರಿಂದ**

ಚನ್ನಗಿರಿಯಿಂದ ದಕ್ಷಿಣಾಭಿಮುಖವಾಗಿ ಹೊನ್ನೆಬಾಗಿಗೆ ಮಧ್ಯೆ ಭಾಗದಲ್ಲಿ  ರಸ್ತೆ ಬರುತ್ತದೆ  ಎಂದರೆ ಸರಿ.  ಸದರಿ ರಸ್ತೆಯ ಎರಡೂ ಬದಿಗಳಲ್ಲಿ ವಿವಿಧ ಬಗೆಯ ಅಂಗಡಿಗಳು ಇರುತ್ತವೆ ಎಂದರೆ ಸರಿ.  ನಮ್ಮ ಅಂಗಡಿಯ ಹೆಸರು ಗ್ಯಾಲಕ್ಸಿ ಬೇಕರಿ ಆಗಿರುತ್ತದೆ. ಯಾವುದೇ ಅಂಗಡಿಯನ್ನು ಹಾಕಬೇಕಾದರೆ ಪಂಚಾಯತಿಯಿಂದ ಪರವಾನಿಗೆ ಪಡೆದಕೊಳ್ಳಬೇಕು ಎಂದರೆ ನನಗೆ ಗೊತ್ತಿಲ್ಲ.  ಹೊನ್ನೆಬಾಗಿಯಲ್ಲಿ ನಾನು ಹೇಳುವ ಹೆಸರಿನ ಯಾವುದೇ ಬೇಕರಿ ಇರುವುದಿಲ್ಲ ಎಂದರೆ ಸರಿಯಲ್ಲ.  ಚಾಸಾ-5 ಮತ್ತು 6 ರವರು ಅಂಗಡಿಯಲ್ಲಿ ಇದ್ದ ಕಾರಣ ಅವರ ಜೊತೆ ಇರುತ್ತೇನೆ. ಸಾಮಾನ್ಯವಾಗಿ ಮು.ಮಾ-1 ತೋಟದ ಕೆಲಸ ಮಾಡುವವರ ಮನೆಯಲ್ಲಿರುತ್ತವೆ ಎಂದರೆ ಸರಿ. ಆರೋಪಿತರು ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ಮಾಡುತ್ತಿದ್ದು ಅವರ ಹೆಸರಿನಲ್ಲಿ ಯಾವುದೇ ಅಸ್ತಿ ಇರುವುದಿಲ್ಲ ಎಂದರೆ ಸರಿ. ಹೊನ್ನೆಬಾಗಿ ಸುಮಾರು 1000 ಮನೆಗಳಿರುವ ಗ್ರಾಮ ಎಂದರೆ ಸರಿ. ಒಂದು ವೇಳೆ ಹೊನ್ನೆಬಾಗಿಯಲ್ಲಿ ಯಾವುದೇ ಗಲಾಟೆಯಾದಲ್ಲಿ 500 ರಿಂದ 1000 ಜನ ತಕ್ಷಣ ಸೇರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಗಲಾಟೆಯಾದಾಗ ಸುಮಾರು 4-5 ಜನ ಮತ್ತು ಬೇರೆ ಅಂಗಡಿಯವರು ಇದ್ದರು ಎಂದು ನುಡಿಯುತ್ತಾರೆ. ಬೇರೆ 4-5 ಜನರು ಹೆಸರು ನನಗೆ ಹೇಳಲಾಗುವುದಿಲ್ಲ.  ನಾನು 7 ನೇ ಆರೋಪಿಯಿಂದ ಹಣ ಪಡೆದುಕೊಂಡಿದ್ದು ಅದನ್ನು ಅವರು ಮರಳಿ ಕೇಳಲುಬಂದಾಗ ಗಲಾಟೆಯಾಗಿರುತ್ತದೆ.  ನಾನು 7ನೇ

ಆರೋಪಿಯಿಂದ ಪಡೆದುಕೊಂಡ ಹಣವನ್ನು ಮರಳಿ ನೀಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ನಿಪಿ-1 ರಂತೆ ಸುಳ್ಳು ದೂರನ್ನು ಆರೋಪಿತರು ವಿರುದ್ದ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1 ನ್ನು ನಮ್ಮ ದೊಡ್ಡಪ್ಪನ ತೋಟದಿಂದ ತೆಗೆದುಕೊಂಡು ಬಂದಿರುತ್ತೇನೆ. ನನ್ನ ದೊಡ್ಡಪ್ಪನ ಹೆಸರು ಉಬೇರ್ ಆಗಿರುತ್ತದೆ. ಮು.ಮಾ-1 ನ್ನು ಉಬೇರ್ ರವರ ತೋಟದಿಂದ ತೆಗೆದುಕೊಂಡ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಮು.ಮಾ-1 ರಿಂದ 3 ನೇ ಆರೋಪಿ ಚಾಸಾ-4 ರವರಿಗೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮು.ಮಾ-1 ನ್ನು ಉಬೇರ್ ರವರ ತೋಟದಿಂದ ತಂದ ಬಗ್ಗೆ ಮತ್ತು ಉಬೇರ್ ರವರು ತೋಟವನ್ನು ಹೊಂದಿದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ಮು.ಮಾ-1 ರಸ್ತೆಯ ಪಕ್ಕದಲ್ಲಿರುತ್ತದೆ. ನಿಪಿ-2 ರ ಕಾಲಕ್ಕೆ ಸ್ಥಳದಲ್ಲಿ ಸುಮಾರು 15 ಜನ ಇರುತ್ತಾರೆ. ಅವರ ಹೆಸರನ್ನು ನನಗೆ ಹೇಳಲಾಗುವುದಿಲ್ಲ. ಘಟನಾ ಸ್ದಳವು ಜನಸಂದಣಿ ಪ್ರದೇಶ ಎಂದರೆ ಸರಿ. ಮು.ಮಾ-1ರ ಮೇಲೆ ಪೊಲೀಸರು ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಮು.ಮಾ-1ರ ಮೇಲೆ ಚಾಸಾ-2 ಮತ್ತು 3 ರವರ ಸಹಿ ಪಡೆದಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ಎಷ್ಟು ಪೇಪರ್ ಗಳಿಗೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ.

ನಿಪಿ-1 ನ್ನು ಟೈಪ್ ಮಾಡಿಸಿಕೊಟ್ಟಿದ್ದು ಅದನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳುವ ಘಟನಾ ದಿನ ಯಾವುದೇ ಘಟನೆ ನಡೆದಿರುವುದಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಪೈಪ್ ನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿತರ ಪೈಕಿ ಯಾವ ಯಾವ ಆರೋಪಿತರು ಯಾವ ಯಾವ ಅವಾಚ್ಯ ಶಬ್ದಗಳಿಂದ ನನಗೆ ಬೈಯ್ದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ-2 ನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಯ ಸುತ್ತಮುತ್ತ ಮನೆಗಳುಇರುವುದಿಲ್ಲ. ನಿಪಿ-2ರ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಈ ಪ್ರಕರಣಕ್ಕೂ , ಆರೋಪಿತಗೂ ಮತ್ತು

ಮು.ಮಾ-1 ಕ್ಕು ಯಾವುದೇ ಸಂಬಂಧ ಇರದೆ ಇದ್ದರು ಸಹ 7 ನೆ ಆರೋಪಿತರಿಗೆ ಹಣ ನೀಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಆಸ್ಪತ್ರೆಯಲ್ಲಿ ಚಿಕಿತ್ತೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ವಿಚಾರ ನನಗೆಗ ೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಚೆಕ್ಕುಬಂದಿ ಬರೆದಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**